**GOVERNMENT OF KARNATAKA**

**NO: RD 77 LRA 2020**

**KARNATAKA GOVERNMENT SECRETARIAT,
MULTISTORIED BUILDING,
BENGALURU, DATED: 27.10.2021.**

**NOTIFICATION**

The draft of the following rules further to amend the Karnataka Land Reforms Rules, 1974, was published as required by sub-section (1) of section 137 read with section 38A of the Karnataka Land Reforms Act, 1961 (Karnataka Act 10 of 1962) in Notification No: RD 77 LRA 2020 dated: 21.01.2021 published in Volume – 84 of Part – IV A of the Karnataka Gazette dated: 22.01.2021 inviting objections or suggestions from all persons likely to be affected thereby within fifteen days from the date of its publication in the official Gazette.

Whereas the said Gazette was made available to the public on 22.01.2021. And whereas no objections and suggestions have been received by the State Government within the period specified above.

Now, Therefore, in exercise of the powers conferred by sub-section (1) of section 137 read with section 38A of the Karnataka Land Reforms Act, 1961 (Karnataka Act 10 of 1962) the Government of Karnataka hereby makes the following rules to amend the Karnataka Land Reforms Rules, 1974, namely:-

**RULES**

**1. Title and Commencement.-** (1) These rules may be called the Karnataka Land Reforms (Amendment) Rules, 2020.

(2) They shall come into force from the date of their final publication in the Official Gazette.

**2. Amendment of rule 2.-** In the Karnataka Land Reforms Rules, 1974 (herein after referred to as the said rules), in rule 2, in clause (ii-a), the words "High Level Committee or" shall be omitted.

**3. Omission of rule 28.-** Rule 28 of the said rules, shall be omitted.

**4. Omission of rule 29.-** Rule 29 of the said rules, shall be omitted.

**5. Omission of rule 30.-** Rule 30 of the said rules, shall be omitted.

**6. Amendment of rule 31.-** In rule 31 of the said rules, in sub-rule (2), the words, Brackets, figures and letter, "under sub-section (3) of Section 79-B" the shall be omitted.

**7. Omission of rule 32.-** Rule 32 of the said rules, shall be omitted.

**8. Omission of rule 33.-** Rule 33 of the said rules, shall be omitted.

**9. Amendment of rule 38B.-** In rule 38B, of the said rules,-

(i) in sub-rule (1), for clause (a) except "Explanation" the following shall be substituted, namely:-

"(a) exemption under section 109 for the purpose of industrial development may be granted,-

(i) in case of industries upto rupees fifteen crores on the recommendation of the District Level Single Window Agency headed by the Deputy Commissioner;

(ii) in case of industries having a total investment upto rupees five hundred crores by the State Level Single Window Clearance Committee (SLSWCC) on the recommendation of the Land Audit Committee headed by the Minister in charge of Large and Medium Scale Industries; and

(iii) in case of industries having a total investment of more than five hundred crores by the State High Level Clearance Committee (SHLCC) on the recommendation of the Land Audit Committee headed by Chief Minister."

(ii) in sub-rule (3), in clause (b) in sub-clause (I),-

(a) for item (i), the following shall be substituted, namely:-

"(i) The Karnataka Hindu Religious Institutions and Charitable Endowments Act, 1997 (Karnataka Act 33 of 2001);

(b) items (ii) to (vii) and item (ix) shall be omitted.

(iii) in sub-rule (5), for clause (a), the following shall be substituted, namely:-

"(a) exemption under section 109 for the purpose of Horticulture including Floriculture and Agro-based industry, shall be made,-

(i) in respect of a project requiring upto twenty units of land on the recommendation of the District Level Single Window Agency headed by the Deputy Commissioner; and

(ii) in respect of a project requiring land in excess of twenty units by the Government".

**10. Amendment of rule 38-C,-** In rule 38C of the said rules,-

(i) for sub-rule (2), the following shall be substituted, namely:-

"(2) All exemptions under these rules shall be granted subject to clearance by the State Level Single Window Clearance Committee (SLSWCC)/ State High Level Clearance Committee (SHLCC).

(ii) for sub-rule (3), the following shall be substituted, namely:-

(3) The State Level Single Window Clearance Committee (SLSWCC)/ State High Level Clearance Committee (SHLCC) while giving clearance to the project under this rule shall ensure, depending on the purpose for which exemption is sought, that the general conditions laid down under rule 38-D are also satisfied".

**11. Amendment of rule 38-D,-** In rule 38D of the said rules, in sub-rule (4), in the proviso to clause (ii) ,-

(i) for the words "Schedule Bank" the words and figures "Financial Institution specified in clauses (a) and (b) of sub-section (1) of section 81" shall be substituted; and

(ii) for the words and figures "section 3 of the Companies Act, 1956" the words and figures "section 2 of the Companies Act, 2013" shall be substituted.

**12. Omission of Form 12.-** In the said rules, Form 12 and the entries relating thereto shall be omitted.

**13. Omission of Form 13.-** In the said rules, Form 13 and the entries relating thereto shall be omitted.

**14. Omission of Form 14.-** In the said rules, Form 14 and the entries relating thereto shall be omitted.

**15. Substitution of Form 15A and 15B,-** In the said rules, for Form-15A and Form-15B and entries relating thereto the following shall be substituted, namely:-

**"FORM 15-A**

(See rule 38-D)

Application for claiming / granting exemption under section 109 of the Karnataka Land Reforms Act, 1961

(To be filled by the Application/Institution)

| | | |
|---|---|---|
| 1 | Name of the Applicant / Institution with detailed address (in block letters) | |
| 2 | Purpose for which exemption is sought | |
| 3 | Date of Registration of firm/Institution under the Companies Act, 2013 (Central Act 18 of 2013) / the Karnataka Societies Registration Act, 1960 (Karnataka Act No 17 of 1960) / any other Law for time being in force (Copy of the Registration document to be enclosed along with the Memorandum of Article of Association). In case of Co- | |

| | | |
|---|---|---|
| | operative Housing Society, list of Members to be enclosed. | |
| 4 | (a) Registration Certificate issued by the Department of Industries and Commerce for having registered as Industry /I.E.M (Industrial Entrepreneur Memorandum) (Copy to be enclosed).<br>(b) In case of educational Institutions recognition letter/order issued by the State or Central Government. | |
| 5 | Details of District, Village, Taluk, Sy.No. and extent of land for which exemption is sought | |
| 6 | Whether the applicant is already having agricultural land in his/its name or in the name of any subsidiary institution/company. If so, furnish the details of District, Taluk, Village, Survey Number and extent. | |

PLACE:

DATE: Signature of the Applicant/Institution

**FORM 15-B**

(See Rule 38-D)

Application for claiming /granting exemption under section 109 of the Karnataka Land Reforms Act, 1961

(To be filled by the Applicant /Institution)

| | | |
|---|---|---|
| 1 | Name of the Applicant/Institution with detailed address (in block letters) | |
| 2 | Purpose for which exemption is sought | |
| 3 | Date of Registration of firm/Institution under the Companies Act, 2013 (Central Act 18 of 2013) / the Karnataka Societies Registration Act, 1960 (Karnataka Act No 17 of 1960)/ any other Law for time being in force. | |
| 4 | (a) Whether the Registration Certificate issued by the Department of Industries and Commerce for having registered as an industry /I.E.M (Industrial Entrepreneur Memorandum) is enclosed<br>(b) In case of education Institution whether the recognition letter/order issued by the State or Central Government is enclosed.<br>(c) In case of place of worship whether the notification issued by the Government is enclosed. | |

| | | |
|---|---|---|
| 5 | Whether the proposed land comes under the non-alienation clause under:-<br>(1) the Karnataka Land Reforms Act, 1961.<br>(2) any Inams Abolition Act,<br>(3) the Karnataka Land Grant Rules, 1969 or<br>(4) the Karnataka Scheduled Castes and Scheduled Tribes (prohibition of transfer of certain lands) Act, 1978 (if permission is obtain from competent Authority attested copy to be enclosed) | |
| 6 | Name and address of the proposed seller of the land (survey number wise):<br>(a) When and how the land now propose to be sold was obtained:<br>(i) Inherited<br>(ii) purchased<br>(iii) Granted<br>(iv) Others<br>(Give three previous transactions if any) | |
| 7 | Whether the land is in irrigated area? | |

PLACE:

DATE:

Signature of the Applicant/Institution”

By order and in the name of
the Governor of Karnataka

[H.M.Sudarshan]
Under Secretary to Government
Department of Revenue [Land Reforms]

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 77 ಎಲ್ಆರ್ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:27.10.2021

**ಅಧಿಸೂಚನೆ**

ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ 38ಎನ ಪ್ರಕರಣದೊಂದಿಗೆ ಓದಿಕೊಂಡಂತೆ 137ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 2020ನ್ನು ಪ್ರಸ್ತಾಪಿಸಿ ದಿನಾಂಕ: 21.01.2021ರ ಕರಡು ಅಧಿಸೂಚನೆ ಸಂಖ್ಯೆ: ಕಂಇ 77 ಎಲ್ಆರ್ಎ 2020ನ್ನು ದಿನಾಂಕ: 22.01.2021ರ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ (ಭಾಗ IV-A) (ವಾಲ್ಯೂಮ್-84) ಪ್ರಕಟಿಸಿದ್ದು, ಆ ಮೂಲಕ ಭಾದಿತರಾಗುವ ಸಂಭವವಿರುವ ವ್ಯಕ್ತಿಗಳಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮೇಲ್ಕಂಡ ವಿಶೇಷ ರಾಜ್ಯಪತ್ರವನ್ನು ದಿನಾಂಕ: 22ನೇ ಜನವರಿ 2021 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡು ನಿಯಮಗಳ ಬಗ್ಗೆ ನಿಗದಿಪಡಿಸಲ್ಪಟ್ಟ ಮೇಲ್ಕಂಡ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳು ಸರ್ಕಾರದಲ್ಲಿ ಸ್ವೀಕೃತವಾಗದಿರುವುದರಿಂದ;

ಈಗ ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961 (1962 ರ ಕರ್ನಾಟಕ ಅಧಿನಿಯಮ ಸಂಖ್ಯೆ 10)ರ 38ಎನ ಪ್ರಕರಣದೊಂದಿಗೆ ಓದಿಕೊಂಡಂತೆ 137ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ಕರ್ನಾಟಕ ಭೂ ಸುಧಾರಣೆ ನಿಯಮಗಳು, 1974ಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ತರಲು ನಿಯಮಗಳನ್ನು ರಚಿಸುತ್ತದೆ:-

**ನಿಯಮಗಳು**

**1. ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅವು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು

**2. 2ನೇ ನಿಮಯದ ತಿದ್ದುಪಡಿ.-** ಕರ್ನಾಟಕ ಭೂ ಸುಧಾರಣೆ ನಿಯಮಗಳು, 1977ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂಬುದಾಗಿ ಕರೆಯಲಾಗಿದೆ) 2ನೇ ನಿಯಮದಲ್ಲಿನ ಖಂಡ (ii-ಎ) ನಲ್ಲಿ "ಉನ್ನತ ಮಟ್ಟದ ಸಮಿತಿ ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**3. 28ನೇ ನಿಯಮವನ್ನು ಬಿಟ್ಟು ಬಿಡುವುದು.-** ಸದರಿ ನಿಯಮಗಳ 28ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**4. 29ನೇ ನಿಯಮವನ್ನು ಬಿಟ್ಟು ಬಿಡುವುದು.-** ಸದರಿ ನಿಯಮಗಳ 29ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**5. 30ನೇ ನಿಯಮವನ್ನು ಬಿಟ್ಟು ಬಿಡುವುದು.-** ಸದರಿ ನಿಯಮಗಳ 30ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**6. 31ನೇ ನಿಮಯದ ತಿದ್ದುಪಡಿ.-** ಸದರಿ ನಿಯಮಗಳನ್ನು 31ನೇ ನಿಯಮದ 2ನೇ ಉಪ ನಿಯಮದಲ್ಲಿ "79-ಬಿ ಪ್ರಕರಣದ (3)ನೇ ಉಪ ಪ್ರಕರಣದಡಿ" ಎಂಬ ಪದಗಳು, ಆವರಣಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಬಿಟ್ಟುಬಿಡತಕ್ಕದ್ದು.

**7. 32ನೇ ನಿಯಮವನ್ನು ಬಿಟ್ಟು ಬಿಡುವುದು.-** ಸದರಿ ನಿಯಮಗಳ 32ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**8. 33ನೇ ನಿಯಮವನ್ನು ಬಿಟ್ಟು ಬಿಡುವುದು.-** ಸದರಿ ನಿಯಮಗಳ 33ನೇ ನಿಯಮವನ್ನು ಬಿಟ್ಟುಬಿಡತಕ್ಕದ್ದು.

**9. 38 ಬಿ ನಿಮಯದ ತಿದ್ದುಪಡಿ.-** ಸದರಿ ನಿಯಮಗಳನ್ನು 38ಬಿ ನಿಯಮದಲ್ಲಿನ,-

(i) (1)ನೇ ಉಪ ನಿಯಮದಲ್ಲಿ "ವಿವರಣೆ" ಹೊರತುಪಡಿಸಿ ಖಂಡ (ಎ) ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಕೈಗಾರಿಕಾ ಅಭಿವೃದ್ಧಿ ಉದ್ದೇಶಕ್ಕಾಗಿ 109ನೇ ಪ್ರಕರಣದಡಿ,-

(i) ಹದಿನೈದು ಕೋಟಿ ರೂಪಾಯಿಗಳವರೆಗೆ ಬಮಡವಾಳ ಹೂಡಿಕೆಯನ್ನು ಹೊಂದಿರುವ ಕೈಗಾರಿಕೆಗಳ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರ ನೇತೃತ್ವದ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಏಜೆನ್ಸಿಯ ಶಿಫಾರಸಿನ ಮೇಲೆ;

(ii) ಐದು ನೂರು ಕೋಟಿ ರೂಪಾಯಿಗಳ ಒಟ್ಟು ಬಂಡವಾಳ ಹೂಡಿಕೆಯನ್ನು ಹೊಂದಿರುವ ಕೈಗಾರಿಕೆಗಳ ಸಂದರ್ಭದಲ್ಲಿ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಪ್ರಭಾರ ಹೊಂದಿರುವ ಸಚಿವರ ನೇತೃತ್ವದ ಭೂ ಲೆಕ್ಕಪರಿಶೋಧನಾ ಸಮಿತಿಯ ಶಿಫಾರಸಿನ ಮೇಲೆ ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ ಸಮಿತಿ (ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ) ಯು; ಮತ್ತು

(iii) ಐದು ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಲ ಹೂಡಿಕೆಯನ್ನು ಹೊಂದಿರವ ಕೈಗಾರಿಕೆಗಳ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ನೇತೃತ್ವದ ಭೂ ಲೆಕ್ಕ ಪರಿಶೋಧನಾ ಸಮಿತಿಯ ಶಿಫಾರಸಿನ ಮೇಲೆ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮತಿ (ಎಸ್‌ಹೆಚ್‌ಎಲ್‌ಸಿಸಿ)ಯು ವಿನಾಯಿತಿಯನ್ನು ನೀಡಬಹುದು."

(ii) (3)ನೇ ಉಪನಿಯಮದಲ್ಲಿ, (ಬಿ) ಖಂಡ (I)ನೇ ಉಪ ಖಂಡದಲ್ಲಿ,-

(ಎ) (i)ನೇ ಬಾಬಿನ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(i) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ ಸಂಖ್ಯೆ 33);

(ಬಿ) (ii) ರಿಂದ (vii) ರ ವರೆಗಿನ ಬಾಬುಗಳಣ್ನು ಹಾಗೂ (ix) ನೇ ಬಾಬನ್ನು ಬಿಟ್ಟುಬಿಡತಕ್ಕದ್ದು.

(iii) (5) ನೇ ಉಪ ನಿಯಮದಲ್ಲಿ ಖಂಡ (ಎ) ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪುಷ್ಪ ಕೃಷಿ ಮತ್ತು ಕೃಷಿ ಆಧಾರತ ಕೈಗಾರಿಕೆ ಸೇರಿದಂತೆ ತೋಟಗಾರಿಕೆ ಸೇರಿದಂತೆ ತೋಟಗಾರಿಕೆಯ ಉದ್ದೇಶಕ್ಕಾಗಿ 109ನೇ ಪ್ರಕರಣದಡಿ ವಿನಾಯಿತಿಯನ್ನು.-

(i) ಇಪ್ಪತ್ತು ಯೂನಿಟ್‌ಗಳವರೆಗೆ ಭೂಮಿ ಅಗತ್ಯವಿರುವ ಯಾವುದೇ ಯೋಜನೆಯ ಸಂಬಂಧದಲ್ಲಿ ಜಿಲ್ಲಾದಿಕಾರಿಯವರ ನೇತೃತ್ವದ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಏಜೆನ್ಸಿಯ ಶಿಫಾರಸಿನ ಮೇಲೆ; ಮತ್ತು

(ii) ಇಪತ್ತು ಯೂನಿಟ್‌ಗಳಿಗಿಂತ ಹೆಚ್ಚು ಭೂಮಿಯ ಅಗತ್ಯವಿರುವ ಒಂದು ಯೋಜನೆಯ ಸಂಬಂಧದಲ್ಲಿ, ಸರ್ಕಾರವು ಮಾಡತಕ್ಕದ್ದು."

**10. 38-ಸಿ ನಿಮಯದ ತಿದ್ದುಪಡಿ.-** ಸದರಿ ನಿಯಮಗಳ 38-ಸಿ ನಿಯಮದಲ್ಲಿ,-

(i) (2) ನೇ ಉಪ ನಿಯಮದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಈ ನಿಯಮಗಳಡಿಯ ಎಲ್ಲಾ ವಿನಾಯಿತಿಗಳನ್ನು, ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ ಸಮಿತಿಯ (ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ) / ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯ (ಎಸ್‌ಹೆಚ್‌ಎಲ್‌ಸಿಸಿ) ಅನುಮೋದನೆಗೆ ಒಳಪಟ್ಟು ಮಂಜೂರು ಮಾಡತಕ್ಕದ್ದು.

(ii) (3) ನೇ ಉಪ ನಿಯಮದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(3) ರಾಜ್ಯ ಮಟ್ಟದ ಏಕ ಗವಾಕ್ಷಿ ಅನುಮೋದನಾ (ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ)/ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿಯ (ಎಸ್‌ಹೆಚ್‌ಎಲ್‌ಸಿಸಿ) ಅನುಮೋದನೆ ನೀಡುವಾಗ, ಅನುಮತಿಯನ್ನು ಕೋರಿರುವ ಉದ್ದೇಶವನ್ನು ಅವಲಂಬಿಸಿ, 38-ಡಿ ನಿಯಮದಡಿ ವಿಧಿಸಲಾಗಿರುವ ಸಾಮಾನ್ಯ ಷರತ್ತುಗಳನ್ನು ಸಹ ತೃಪ್ತಿಕರವಾಗಿ ಪೂರೈಸಲಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು."

**11. 38-ಡಿ ನಿಮಯದ ತಿದ್ದುಪಡಿ.-** ಸದರಿ ನಿಯಮಗಳ 38-ಡಿ ನಿಯಮದಲ್ಲಿ (4) ನೇ ಉಪ ನಿಯಮದಲ್ಲಿನ ಖಂಡ (ii) ರ ಪರಂತುಕದಲ್ಲಿ,-

(i) "ಷಡ್ಯೂಲ್ ಬ್ಯಾಂಕ್" ಎಂಬ ಪದಗಳಿಗೆ ಬದಲಾಗಿ, "81ನೇ ಪ್ರಕರಣದ (1)ನೇ ಉಪ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟ ಪಡಿಸಿದ ಹಣಕಾಸು ಸಂಸ್ಥೆ" ಎಂಬ ಪದಗಳು ಮತ್ತು ಅಂಕಿಗಳ ಬದಲಿಗೆ "ಕಂಪನಿಗಳ ಅಧಿನಿಯಮ, 2013ರ 2ನೇ ಪ್ರಕರಣ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

**12. ನಮೂನೆ-12 ಅನ್ನು ಬಿಟ್ಟುಬಿಡುವುದು.-** ಸದರಿ ನಿಯಮಗಳಲ್ಲಿ, ನಮೂನೆ-12 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**13. ನಮೂನೆ-13 ಅನ್ನು ಬಿಟ್ಟುಬಿಡುವುದು.-** ಸದರಿ ನಿಯಮಗಳಲ್ಲಿ, ನಮೂನೆ-13 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**14. ನಮೂನೆ-14 ಅನ್ನು ಬಿಟ್ಟುಬಿಡುವುದು.-** ಸದರಿ ನಿಯಮಗಳಲ್ಲಿ, ನಮೂನೆ-14 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**15. ನಮೂನೆ-15ಎ ಮತ್ತು 15-ಬಿ ಗಳ ಪ್ರತಿಯೋಜನೆ,-** ಸದರಿ ನಿಯಮಗಳಲ್ಲಿ, ನಮೂನೆ-15ಎ ಮತ್ತು ನಮೂನೆ-15ಬಿ ಹಾಗೂ ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"ನಮೂನೆ 15-ಎ**

(ನಿಯಮ 38-ಡಿ ನೋಡಿ)

ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961 ರ 109ನೇ ಪ್ರಕರಣದಡಿ ವಿನಾಯಿತಿ ಕ್ಲೇಮು ಮಾಡುವುದಕ್ಕಾಗಿ / ಮಂಜೂರಾತಿಗಾಗಿ ಅರ್ಜಿ

(ಅರ್ಜಿದಾರರು / ಅರ್ಜಿದಾರ ಸಂಸ್ಥೆಯು ಭರ್ತಿ ಮಾಡಬೇಕಾದುದು)

| | | |
|---|---|---|
| 1 | ವಿವರವಾದ ವಿಳಾಸ ಸಹಿತ ಅರ್ಜಿದಾರರ / ಅರ್ಜಿದಾರ ಸಂಸ್ಥೆಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ವಿನಾಯಿತಿ ಕೋರಿರುವ ಉದ್ದೇಶ | |
| 3 | ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18) / ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 17) / ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಉದ್ಯಮ/ಸಂಸ್ಥೆಯು ನೋಂದಣಿಯಾದ ದಿನಾಂಕ (ಸಂಘ ವಿವರ ಪತ್ರ ಮತ್ತು ನಿಯಮಾವಳಿಗಳ ಜೊತೆಗೆ ನೋಂದಣಿ ದಸ್ತಾವೇಜಿನ ಪ್ರತಿಯನ್ನು ಲಗತ್ತಿಸುವುದು) ಸಹಕಾರ ಗೃಹ ನಿರ್ಮಾಣ ಸಂಘವಾಗಿದ್ದ ಪಕ್ಷದಲ್ಲಿ ಸದಸ್ಯರ ಪಟ್ಟಿಯನ್ನು ಲಗತ್ತಿಸುವುದು. | |
| 4 | (ಎ) ಕೈಗಾರಿಕೆ / ಐ. ಇ. ಎಂ (ಕೈಗಾರಿಕೋದ್ಯಮಿ ವಿವರ ಪತ್ರ) ಆಗಿ ನೋಂದಣಿ ಮಾಡಿಸಿಕೊಂಡುರುವುದಕ್ಕಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ನೀಡುವ ನೋಂದಣಿ ಪ್ರಮಾಣ ಪತ್ರ (ಪ್ರತಿ ಲಗತ್ತಿಸುವುದು).<br>(ಬಿ) ಶೈಕ್ಷಣಿಕ ಸಂಸ್ಥೆಗಳ ಸಂದರ್ಭದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರವು ನೀಡಿದ ಮಾನ್ಯತೆ ಪತ್ರ/ಆದೇಶ. | |
| 5 | ವಿನಾಯಿತಿ ಕೋರಿದ ಭೂಮಿ ಇರುವ ಜಿಲ್ಲೆ, ಗ್ರಾಮ, ತಾಲ್ಲೂಕು, ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರಗಳು. | |
| 6 | ಅರ್ಜಿದಾರರು ಈಗಾಗಲೇ ತನ್ನ ಹೆಸರಿನಲ್ಲಾಗಲೀ ಇಲ್ಲವೆ ಯಾವುದೇ ಅಧೀನ ಸಂಸ್ಥೆ / ಕಂಪನಿಯ ಹೆಸರಿನಲ್ಲಾಗಲೀ ಕೃಷಿ ಭೂಮಿಯನ್ನು ಹೊಂದಿದ್ದಾನೆಯೇ? ಹೊಂದಿದ್ದಲ್ಲಿ, ಆ ಭೂಮಿ ಇರುವ ಜಿಲ್ಲೆ, ತಾಲ್ಲೂಕು, ಗ್ರಾಮ, ಸರ್ವೆ ನಂಬರ್ ಹಾಗೂ ವಿಸ್ತೀರ್ಣದ ವಿವರಗಳನ್ನು ಒದಗಿಸಿ. | |

ಸ್ಥಳ : ಅರ್ಜಿದಾರನ /ಅರ್ಜಿದಾರ ಸಂಸ್ಥೆಯ ಸಹಿ

ದಿನಾಂಕ:

# ನಮೂನೆ 15-ಬಿ

(ನಿಯಮ 38-ಡಿ ನೋಡಿ)

ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961 ರ 109ನೇ ಪ್ರಕರಣದಡಿ ವಿನಾಯಿತಿ ಕ್ಲೇಮು ಮಾಡುವುದಕ್ಕಾಗಿ / ಮಂಜೂರಾತಿಗಾಗಿ ಅರ್ಜಿ

(ಅರ್ಜಿದಾರರು / ಅರ್ಜಿದಾರ ಸಂಸ್ಥೆಯು ಭರ್ತಿ ಮಾಡಬೇಕಾದುದು)

| | | |
|---|---|---|
| 1 | ವಿವರವಾದ ವಿಳಾಸ ಸಹಿತ ಅರ್ಜಿದಾರರ / ಅರ್ಜಿದಾರ ಸಂಸ್ಥೆಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ವಿನಾಯಿತಿ ಕೋರಿರುವ ಉದ್ದೇಶ | |
| 3 | ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18) / ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ ಸಂಖ್ಯೆ 17) / ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಉದ್ಯಮ/ಸಂಸ್ಥೆಯು ನೋಂದಣಿಯಾದ ದಿನಾಂಕ (ಸಂಘ ವಿವರ ಪತ್ರ ಮತ್ತು ನಿಯಮಾವಳಿಗಳ ಜೊತೆಗೆ ನೋಂದಣಿ ದಸ್ತಾವೇಜಿನ ಪ್ರತಿಯನ್ನು ಲಗತ್ತಿಸುವುದು) ಸಹಕಾರ ಗೃಹ ನಿರ್ಮಾಣ ಸಂಘವಾಗಿದ್ದ ಪಕ್ಷದಲ್ಲಿ ಸದಸ್ಯರ ಪಟ್ಟಿಯನ್ನು ಲಗತ್ತಿಸುವುದು. | |
| 4 | (ಎ) ಕೈಗಾರಿಕೆ / ಐ. ಇ. ಎಂ (ಕೈಗಾರಿಕೋದ್ಯಮಿ ವಿವರ ಪತ್ರ) ಆಗಿ ನೋಂದಣಿ ಮಾಡಿಸಿಕೊಂಡುರುವುದಕ್ಕಾಗಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ನೀಡುವ ನೋಂದಣಿ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿದೆಯೇ?<br>(ಬಿ) ಶೈಕ್ಷಣಿಕ ಸಂಸ್ಥೆಯಾಗಿದ್ದ ಸಂದರ್ಭದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರವು ನೀಡಿದ ಮಾನ್ಯತೆ ಪತ್ರ/ಆದೇಶವನ್ನು ಲಗತ್ತಿಸಿದೆಯೇ?<br>(ಸಿ) ಪೂಜನೀಯ ಸ್ಥಳವಾಗಿದ್ದ ಪಕ್ಷದಲ್ಲಿ, ಸರ್ಕಾರವು ಹೊರಡಿಸಿದ ಅಧಿಸೂಚನೆಯನ್ನು ಲಗತ್ತಿಸಿದೆಯೇ? | |
| 5 | ಪ್ರಸ್ತಾವಪಿತ ಜಮೀನು ಈ ಕೆಳಕಂಡ ಅಧಿನಿಯಮ ಮತ್ತು ನಿಯಮಗಳ ಮೇರೆಗೆ ಪರಭಾರೆ ರಾಹಿತ್ಯ ಖಂಡದಡಿ ಬರುತ್ತದೆಯೇ?<br>(1) ಕರ್ನಾಟಕ ಭೂ ಸುಧಾರಣೆ ಅಧಿನಿಯಮ, 1961<br>(2) ಯಾವುದೇ ಇನಾಂ ರದ್ದಿಯಾತಿ ಅಧಿನಿಯಮ<br>(3) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ಅಥವಾ<br>(4) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 (ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿದ್ದರೆ, ಅದರ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು) | |
| 6 | ಉದ್ದೇಶಿತ ಭೂ ಮಾರಾಟಗಾರನ ಹೆಸರು ಮತ್ತು ವಿಳಾಸ (ಸರ್ವೆ ನಂಬರ್ವಾರು)<br>(ಎ) ಈಗ ಮಾರಾಟ ಮಾಡಲು ಉದ್ದೇಶಿಸಿರುವ ಜಮೀನು ಯಾವಾಗ ಮ್ತು ಯಾವ ರೀತಿ ಬಂದಿತು; | |

| | | |
|---|---|---|
| | (i) ಪಿತ್ರಾರ್ಜಿತ<br>(ii) ಖರೀದಿ<br>(iii) ಮಂಜೂರಾತಿ<br>(iv) ಇತರೆ<br>(ಯಾವುದಾದರೂ ವ್ಯವಹರಣೆಗಳು ನಡೆದಿದ್ದರೆ ಹಿಂದಿನ ಮೂರು ವ್ಯವಹರಣೆಗಳನ್ನು ನೀಡಿ) | |
| 7 | ಭೂಮಿಯು ನೀರಾವರಿ ಪ್ರದೇದಲ್ಲಿದೆಯೇ? | |

ಅರ್ಜಿದಾರನ /ಅರ್ಜಿದಾರ ಸಂಸ್ಥೆಯ ಸಹಿ

ದಿನಾಂಕ:

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಎಂ.ಸುದರ್ಶನ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆಗಳು)